**ತಾಲ್ಲೂಕು ಕಚೇರಿಗಳಲ್ಲಿ ಪಡಸಾಲೆ ಯೋಜನೆಯ ಅನುಷ್ಠಾನ**

- ತಾಲ್ಲೂಕು ಕಛೇರಿಗಳಲ್ಲಿ ಕಂದಾಯ ಇಲಾಖೆಯ ವಿವಿಧ ಸೇವೆಗಳಾದ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಲು ಆಹಾರ ಶಾಖೆಗೆ, ದೃಢೀಕೃತ ನಕಲನ್ನು ಪಡೆಯಲು ದಾಖಲೆ ಕೊಠಡಿಗೆ (Record room), ಪಹಣಿ ಪತ್ರ, ಹಕ್ಕು ಬದಲಾವಣೆ ಅರ್ಜಿಗಳಿಗಾಗಿ ಭೂಮಿ ಶಾಖೆಗೆ, ಸರ್ವೆ ದಾಖಲಾತಿಗೆ ಸರ್ವೆ ಶಾಖೆಗೆ, ವಿವಿಧ ಪ್ರಮಾಣ ಪತ್ರಗಳನ್ನು ಪಡೆಯಲು ಅಟಲ್‌ಜೀ ಜನಸ್ನೇಹಿ ಕೇಂದ್ರ/ನಾಡಕಛೇರಿಗಳಿಗೆ ಇತ್ಯಾದಿ ವಿಭಾಗಕ್ಕೆ ಭೇಟಿ ನೀಡಬೇಕಾಗುತ್ತದೆ.
- ಈ ಅನಾನುಕೂಲತೆಯನ್ನು ತಪ್ಪಿಸಲು ಈ ಎಲ್ಲಾ ಸೇವೆಗಳನ್ನು ಒಂದೇ ಸೂರಿನಡಿಯಲ್ಲಿ ಸಾರ್ವಜನಿಕರಿಗೆ ಒದಗಿಸಲು ಪಡಸಾಲೆ ಯೋಜನೆಯನ್ನು ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಜಾರಿಗೆ 2014–15 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ: ಕಂಇ 132 ಭೂದಾಅ 2014 ಭಾಗ–1; ದಿನಾಂಕ: 04.01.2015 ರಲ್ಲಿ ಪಡಸಾಲೆ ಯೋಜನೆಯನ್ನು 203 ತಾಲ್ಲೂಕು ಕಛೇರಿಯಲ್ಲಿ ಪ್ರತಿ ತಾಲ್ಲೂಕು ಕಛೇರಿಗಳಲ್ಲಿ 7.88 ಲಕ್ಷಗಳಂತೆ ಒಟ್ಟು 16.00 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲು ಆದೇಶವಾಗಿರುತ್ತದೆ.
- ಪಡಸಾಲೆ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಪೀಠೋಪಕರಣಗಳು, ಪಡಸಾಲೆಯ ಒಳಾಂಗಣ ವ್ಯವಸ್ಥೆ, ವಿದ್ಯುಚ್ಛಕ್ತಿ ಸೌಲಭ್ಯ, ಅಂತರ್ಜಾಲ ಸೌಕರ್ಯ ಮುಂತಾದ ವ್ಯವಸ್ಥೆಗಳಿಗಾಗಿ ಪ್ರತಿ ತಾಲ್ಲೂಕು ಕಛೇರಿಗಳಿಗೆ ರೂ. 3.70 ಲಕ್ಷಗಳಂತೆ ಬಿಡುಗಡೆ ಮಾಡಲಾಗಿರುತ್ತದೆ. ರಾಜ್ಯಾದ್ಯಂತ 30 ಜಿಲ್ಲೆಗಳಲ್ಲಿನ 186 ತಾಲ್ಲೂಕುಗಳಲ್ಲಿನ ಪಡಸಾಲೆಯಲ್ಲಿ ಸಾರ್ವಜನಿಕರಿಗೆ ವಿವಿಧ ಸೇವೆಗಳನ್ನು ನೀಡಲು ಕ್ರಮಕೈಗೊಳ್ಳಲಾಗಿರುತ್ತದೆ.
- ಉಳಿದಂತೆ ಪಡಸಾಲೆ ಯೋಜನೆಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಒದಗಿಸಲು ನಿರ್ದೇಶನಾಲಯದಿಂದ ಕೇಂದ್ರೀಕೃತವಾಗಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಪ್ರಕ್ರಿಯೆ ಅಂತಿಮಗೊಂಡ ನಂತರ ಯಂತ್ರೋಪಕರಣಗಳನ್ನು ತಾಲ್ಲೂಕು ಕಛೇರಿಯ ಪ್ರತಿ ಪಡಸಾಲೆಗೆ ಒದಗಿಸಲು ಕ್ರಮಕೈಗೊಳ್ಳಲಾಗುತ್ತಿದೆ.

## ಅನುಬಂಧ -1 ಪಡಸಾಲೆ ವ್ಯವಸ್ಥೆಯಲ್ಲಿನ ವಿವರಗಳು




ಅ. ಕೌಂಟರ್ ಗಳು, ಆ. ಜೆರಾಕ್ಸ್ ಕೊಠಡಿ, ಇ. ಉಪತಹಶೀಲ್ದಾರರ ಕೊಠಡಿ, ಈ. ಎಲ್.ಇ.ಡಿ. ಸ್ಕ್ರೀನ್ ಗಳು

ಉ. ಬರವಣಿಗೆ ಪ್ರದೇಶ, ಊ. ಕುಡಿಯುವ ನೀರಿನ ವ್ಯವಸ್ಥೆ, ಋ.ಮೊಬೈಲ್ ಚಾರ್ಜರ್ ಘಟಕ, ಎ. ಸಾರ್ವಜನಿಕರಿಗೆ ಆಸನ ವ್ಯವಸ್ಥೆ

# Layout plan of Padasale




A. Counters, B. Xerox Room, C. Deputy Tahsildars Chamber, D. L.E.D Screens, E. Writing Place, F. Drinking water facility, G. Mobile Charger Zone, H. Sitting arrangements for Public